IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮಧ್ಯಕಾಲೀನ ಕನ್ನಡ ಶಾಸನಗಳಲ್ಲಿ ವರ್ಣ ಮತ್ತು ಜಾತಿ ವ್ಯವಸ್ಥೆ

\- **ಒಂದು ನೋಟ.**

**- ಡಾ.ಹೇಮಂತ ಬಿ.ಆರ್**

ವರ್ಣ ವ್ಯವಸ್ಥೆಯು ವೇದಗಳಲ್ಲಿ ಕಂಡುಬಂದಿದ್ದು, ಋಗ್ವೇದದಲ್ಲಿ ಬ್ರಾಹ್ಮಣ, ಕ್ಷತ್ರಿಯ ವರ್ಣಗಳ ಉಲ್ಲೇಖವಿದೆ. ಋಗ್ವೇದಕ್ಕೆ ನಂತರ ಸೇರ್ಪಡೆಯಾಯಿತೆನ್ನಲಾದ ಪುರುಷ ಸೂಕ್ತದಲ್ಲಿ ವೈಶ್ಯ, ಶೂದ್ರ ವರ್ಣಗಳ ಉಲ್ಲೇಖವಿದೆ. ಋಗ್ವೇದದಲ್ಲಿ 'ವರ್ಣ' ಎನ್ನುವ ಮಾತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಗುಂಪುಗಳಿಗೆ ಅನ್ವಯವಾಗುವಂತೆ ಬಳಕೆಯಾಗಿಲ್ಲ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[1] ಪುರುಷಸೂಕ್ತದ ಕಾಲಕ್ಕೆ ಸಮಾಜವು ನಾಲ್ಕು ಗುಂಪುಗಳಂತೆ ವಿಭಾಗಗೊಂಡಿತ್ತು. ಬ್ರಾಹ್ಮಣ (ಕವಿ, ಪುರೋಹಿತ, ವಿದ್ವಾಂಸ), ಕ್ಷತ್ರಿಯ (ಆಳುವಾತ, ಯುದ್ಧದಲ್ಲಿ ಭಾಗಿ) ವೈಶ್ಯ (ವ್ಯವಸಾಯ, ವ್ಯಾಪಾರ ಇತರ ಕರ್ಮಗಳನ್ನು ಮಾಡುವಾತ), ಶೂದ್ರ (ಸೇವಾಕಾರ್ಯ ಮಾಡುವಾತ). ತೈತ್ತಿರೀಯ ಸಂಹಿತೆಯಲ್ಲಿ ಈ ನಾಲ್ಕು ಗುಂಪುಗಳು ಸೃಷ್ಟಿಕರ್ತನ ನಾಲ್ಕು ಅಂಗಗಳಿಂದ ಹುಟ್ಟಿದವೆಂದು ಹೇಳಲಾಗಿದೆ.[2] ಪ್ರಾಚೀನ ಕರ್ನಾಟಕದ ಕಾಲದ ಹೊತ್ತಿಗೆ ವರ್ಣಪದ್ಧತಿಯ ಪರಿಪಾಲನೆ ಬಹುಮಟ್ಟಿಗೆ ಕುಸಿದು ಹೋಗಿತ್ತು.[3]ನಂತರದಲ್ಲಿ ಶ್ರಮದ ಆಧಾರದ ಮೇಲೆ ವರ್ಣವ್ಯವಸ್ಥೆ ನಿರ್ಧಾರವಾಗುತ್ತಿತ್ತು. ವೃತ್ತಿಗಳು ಜಾತಿಗಳಾಗಿ ಮಾರ್ಪಾಡಾಗಿರುವುದನ್ನು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಬಹುದು.

**ಶೂದ್ರರು–** ಶೂದ್ರರಿಗೆ ಮೊದಲ ಮೂರು ವರ್ಣದವರಂತೆ ಉಪನಯನ, ವೇದಾಭ್ಯಾಸಕ್ಕೆ ಅವಕಾಶವಿರಲಿಲ್ಲ. ಆಂತರಿಕ, ಬಾಹ್ಯ ಹೋರಾಟಗಳಿಂದ ಬಹುಸಂಖ್ಯೆಯ ಜನರು ಶೂದ್ರರಾದರು. ಈ ಹೋರಾಟ ಪಶುಗಳಿಗಾಗಿ, ಅನಂತರ ಭೂಮಿಯ ಒಡೆತನಕ್ಕಾಗಿ ನಡೆದು, ಯಾರು ಹೋರಾಟದಲ್ಲಿ ಸೋತರೋ ಅವರನ್ನೇ ನಾಲ್ಕನೇ ವರ್ಗದವರೆಂದು ಕರೆಯಲಾಯಿತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[4] "ವರ್ಣವಾಗಿದ್ದ ಶೂದ್ರವು ಜಾತಿಯಾಗಿತ್ತು ಹಾಗೂ ವರ್ಣ, ಜಾತಿಗಳು ಸಮಾನಾರ್ಥಕವಾಗಿದ್ದವು. ವರ್ಣ ಅಥವಾ ಜಾತಿಗಳಲ್ಲಿ ಮೇಲುಕೀಳುಗಳ ಸ್ಪಷ್ಟ ಅನುಶ್ರೇಣಿ ನಿರ್ಮಾಣವಾಯಿತು ಎಂದು ಎಂ.ಚಿದಾನಂದಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ."[5]

ಮಧ್ಯಕಾಲೀನ ಕರ್ನಾಟಕದ ಶಾಸನಗಳಲ್ಲಿ ಶೂದ್ರಪ್ರಜೆ ಎಂಬ ಉಲ್ಲೇಖವಿದೆ.[6] ಶೂದ್ರವಾಡವನ್ನು ಅಗ್ರಹಾರವನ್ನಾಗಿ ಮಾರ್ಪಡಿಸಿದ ವಿಷಯ ಕೆಳಗೆರೆಯ ಶಾಸನದಿಂದ ತಿಳಿದುಬರುತ್ತದೆ.[7] ಈ ಶಾಸನವು ವಿಜಯನಗರ ದೊರೆ ವೀರಪ್ರತಾಪ ದೇವರಾಯನ ಆಳ್ವಿಕೆಯ ಕಾಲದ್ದಾಗಿದೆ. ಕೆಲ್ಲಂಗೆಱೆಯ ವರದನಾಯಕ ಎಂಬುವವನು ಊರ ಮುಂದಿನ ಮಲ್ಲಿಕಾರ್ಜುನ ದೇವರ ದೇವಾಲಯ ಗರ್ಭಗೃಹ ಸುಖನಾಸಿ ರಂಗಮಂಟಪ ಮುಂತಾದ ಸೇವೆಯನ್ನು ಮಾಡಿ ಕೆಲ್ಲಂಗೆಱೆ ಗ್ರಾಮವು 'ಶೂದ್ರವಾಡವಾಗಿದ್ದುದನ್ನು ಅಗ್ರಹಾರವಾಗಿ ಮಾಡಿ' ಕೆಲ್ಲಂಗೆಱೆಯಲ್ಲಿ ವರದರಾಜ ಸಮುದ್ರವನ್ನು ಕಟ್ಟಿಸುತ್ತಾನೆ. ಶೂದ್ರರು ವಾಸುಸುತ್ತಿದ್ದ ಜಾಗವನ್ನು 'ಶೂದ್ರವಾಡ' ಎನ್ನುತ್ತಿದ್ದರು. ಮಧ್ಯಕಾಲೀನ ಕರ್ನಾಟಕದಲ್ಲಿ ಶೂದ್ರರು ವಾಸಿಸುತ್ತಿದ್ದ ಪ್ರತ್ಯೇಕ 'ವಾಡ'ಗಳಿದ್ದವು. ಅವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನಮಾಡುವುದು ರೂಢಿಗೆ ಬಂದಿತೆನ್ನಬಹುದು.

ಶೂದ್ರರಿಗೆ ಸಮಾಜದಲ್ಲಿ ಕೆಲವು ವಿನಾಯಿತಿಗಳು ದೊರೆಯುತ್ತಿದ್ದವು. ಕ್ರಿ.ಶ.1527ರ ಕೃಷ್ಣದೇವರಾಯನ ಕಾಲದ ಯಗಟಿ ಶಾಸನ ಶೂದ್ರರ ಮದುವೆ ಸುಂಕ ಬಿಟ್ಟ ವಿಚಾರವನ್ನು ತಿಳಿಸುತ್ತದೆ.[8] ಬಯ್ಯಪ್ಪನಾಯಕ ಎಂಬುವವನು ರಾಜನ ಅರಿಕೆಯಲ್ಲಿ ಯಗಟಿ ಹತ್ತು ಸಾವಿರ ಸೀಮೆಯೊಳಗೆ ಶೂದ್ರರಿಗೆ ಈ ವಿನಾಯಿತಿಯನ್ನು ನೀಡುತ್ತಾನೆ. 'ಒಂದು ವೇಳೆ ಈ ಕ್ರಿಯೆಯನ್ನು ಯಾರಾದರೂ ಅಳುಪಿದರೆ ಅವರ ಹೆಂಡಿರನ್ನು ಹತ್ತು ಸಾವಿರ ಸೀಮೆಯ ಹದಿನೆಂಟು ಜಾತಿಗೆ ಕೊಟ್ಟವರು' ಎಂಬ ಶಾಪಾಶಯವನ್ನು ಹಾಕಲಾಗಿದೆ. ಶೂದ್ರರೂ ಮದುವೆಗಳಿಗೆ ಸುಂಕ ತೆರಬೇಕಾಗಿದ್ದ ಅಂಶವನ್ನು ಶಾಸನವು ತಿಳಿಸುತ್ತದೆ.

**ನಾವಿದ, ನಾವಲಿಗ–** ಮಧ್ಯಕಾಲೀನ ಕರ್ನಾಟಕದಲ್ಲಿ ಶೂದ್ರರಲ್ಲಿ ನಾವಿದ, ನಾವಲಿಗ ಅಥವಾ ಕ್ಷೌರಿಕ ವೃತ್ತಿಯನ್ನು ಮಾಡುವರು ಮಹತ್ವದ ಪಾತ್ರ ವಹಿಸುತ್ತಿದ್ದರು. ತಮ್ಮ ವೃತ್ತಿಯೊಂದಿಗೆ ಯುದ್ಧಗಳಲ್ಲಿ ಪಾಲ್ಗೊಂಡು ರಾಜ್ಯ ರಕ್ಷಣೆಗೆ ನಿಲ್ಲುತ್ತಿದ್ದರು. ಕ್ರಿ.ಶ.1380ರ ಅಂಚವಾಡಿ ಶಾಸನವು ನಾವಿದ 'ಮಂಚೆ' ಎಂಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ.[9] ಅಂಚವಾಡಿಯ ಬಯಿಚಣ ಮತ್ತು ಅರೆಕೋಹಂದರ ನಡುವೆ ನಡೆದ ಕಾಳಗದಲ್ಲಿ ಅಂಚವಾಡಿಯ ನಾವಿದ ಮಂಚೆ ಹೋರಾಡಿ ಸಾವನ್ನಪ್ಪುವನು. ಮಂಚೆಯನ ನೆನಪಿಗೆ ಒಳಕುಪ್ಪೆಹಳ್ಳಿಯನ್ನು ನೆತ್ತರು ಕೊಡುಗೆಯಾಗಿ ನೀಡಲಾಯಿತು. ಕ್ರಿ.ಶ.1545ರ ಸದಾಶಿವದೇವರಾಯನ ಆಳ್ವಿಕೆಯ ಶಾಸನವು, ರಾಮರಾಜ ಒಡೆಯನು ನಾವಿಂದ ಕೊಂಡೋಜಿಯನ್ನು ಮೆಚ್ಚಿ, ನಾವಿಂದರು ಕೊಡಬೇಕಾದ ಕುಳ, ತೆರಿಗೆ, ಸುಂಕಗಳಿಂದ ವಿನಾಯಿತಿಯನ್ನು ನೀಡುತ್ತಾನೆ.[10]

**ಹೊಲೆಯಾಳು, ಹೊಲೆ–** ಪ್ರಸ್ತುತ ಅಧ್ಯಯನದ ಅವಧಿಯಲ್ಲಿನ ಕೆಲವು ಶಾಸನಗಳಲ್ಲಿ ಹೊಲೆಯಾಳು, ಹೊಲೆ ಎಂಬ ಉಲ್ಲೇಖವಿರುವುದನ್ನು ಗಮನಿಸಬಹುದು. ಕ್ರಿ.ಶ.1403ರ ಬೊಮ್ಮಲಾಪುರದ ಶಾಸನವು ಮದವಡಿನಾಡಿನ ಮೆಣಸೂರು ಗ್ರಾಮವನ್ನು ಹದಿನೆಂಟು ಕಂಪಣದ ನಾಡಿನವರು, ಊರಿನ ಒಡೆಯರು, ಮೂರು ಪಟ್ಟಣದ ಹಲವು ಪ್ರಮುಖರು ತಮಗೆ ದಾನಮೂಲವಾಗಿ ಬಂದ ಹನ್ನೊಂದು ಗ್ರಾಮಗಳನ್ನು ವಿಠ್ಠಣಒಡೆಯನಿಗೆ ದಾನವಾಗಿ ನೀಡಿದರು. ಆ ಸಂದರ್ಭದಲ್ಲಿ ಹನ್ನೊಂದು ಗ್ರಾಮಗಳಿಗೆ ಸಲ್ಲುವ ಗುಡಿ, ಸರಕು, ಹೊಲೆಯಾಳುಗಳು ಸೇರಿ ಅಷ್ಟಭೋಗತೇಜ ಸ್ವಾಮ್ಯವನ್ನು ದಾನವಾಗಿ ನೀಡಲಾಗಿದೆ.[11]

ಕ್ರಿ.ಶ.1426ರ ಮತ್ತೊಂದು ಶಾಸನವು ಕಿರುನಾಗರದ ಅರ್ಕನಾಥದೇವರ ನಂದಾದೀಪಕ್ಕೆ ಸೋವರಸ ಎಂಬುವವನು ದಾನವಾಗಿ 'ಹಾಳ, ಹೊಲೆ, ಕೊಂಕನಕುಳ, ಮಗ್ಗ, ಕಟವಗ, ಹೊಂನನ್ನು' ನೀಡಿರುವ ಸಂಗತಿಯನ್ನು ತಿಳಿಸುತ್ತದೆ.[12] ಈ ಎರಡೂ ಶಾಸನಗಳನ್ನು ಗಮನಿಸಿದಾಗ ಮಧ್ಯಕಾಲೀನ ಕರ್ನಾಟಕದಲ್ಲಿ ಹೊಲೆಯಾಳುಗಳನ್ನು ದಾನದ ಜೊತೆಗೆ ನೀಡುತ್ತಿದ್ದ ಅಂಶ ತಿಳಿಯುತ್ತದೆ. ಶೂದ್ರರನ್ನು ನಿಕೃಷ್ಟವಾಗಿ ಕಾಣುತ್ತಿದ್ದುದನ್ನು ಇದು ಸ್ಪಷ್ಟಪಡಿಸುತ್ತದೆ.

**ಹದಿನೆಂಟು ಜಾತಿಗಳು–**ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ 'ಅಷ್ಟಾದಶಜಾತಿ ಅಥವಾ 'ಹದಿನೆಂಟು ಜಾತಿ' ಪರಿಕಲ್ಪನೆಯ ಬಗ್ಗೆ ಮೊದಲು ಉಲ್ಲೇಖಿಸುವುದು ಲಕ್ಷ್ಮೇಶ್ವರದ ಕ್ರಿ.ಶ. 725ರ ಶಾಸನ ಎಂದು ಡಾ.ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.[13] ಶಾಸನದಲ್ಲಿ "ಓಂ ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಯುವರಾಜರ್ ಪೊರಿಗೆಜೆಯಾ ಮಹಾಜನಕ್ಕುಂ ನಗರಕ್ಕುಂ ಹದಿನೆಂಟುಂ ಪ್ರಕ್ರುತಿಗಳ್ಗುಂ ಕೊಟ್ಟ ಆಚಾರ ವ್ಯವಸ್ಥೆ" ಎಂದು ಉಲ್ಲೇಖಿಸಲಾಗಿದೆ. ಚಿದಾನಂದಮೂರ್ತಿಯವರು 'ಪ್ರಕ್ರುತಿ' ಎಂಬುದನ್ನು 'ಜಾತಿ' ಎಂದು ಅರ್ಥೈಸಿ ಬ್ರಾಹ್ಮಣ ಹಾಗೂ ವರ್ತಕರನ್ನು ಹೊರತುಪಡಿಸಿದ ಹದಿನೆಂಟು ಜಾತಿಗಳು ಎಂದಿದ್ದಾರೆ.

**ತೊತ್ತು–** 'ದಾಸ್ಯ' ಎಂಬುದು ಪ್ರಾಚೀನ ಕಾಲದ ಈಜಿಪ್ಟ್, ಗ್ರೀಸ್, ರೋಂ ಮತ್ತು ಯೂರೋಪಿನ ಅನೇಕ ದೇಶಗಳಲ್ಲಿ ಪ್ರಚಲಿತವಿದ್ದ ಪದ್ಧತಿಯಾಗಿದೆ. ಭಾರತದಲ್ಲಿ ಋಗ್ವೇದದಲ್ಲಿ ದಾಸ ಎಂಬ ಪದ ದಸ್ಯು ಎಂಬ ಪದಕ್ಕೆ ಸಮಾನಾರ್ಥಕವಾಗಿ ಆರ್ಯರ ಶತ್ರುಗಳು ಎಂಬ ಅರ್ಥದಲ್ಲಿ ಬಳಕೆಯಾಗಿದೆ.[14] ಆರ್ಯರು ತಾವು ಸೋಲಿಸಿದ ಆ ಪ್ರದೇಶದ ಮೂಲನಿವಾಸಿಗಳನ್ನು ದಾಸ್ಯಕ್ಕೆ ನೇಮಿಸಿಕೊಂಡರು. ಅವರೇ ದಾಸರೆಂದು ಕ್ರಮೇಣ ಪರಿಗಣಿತವಾಗಿರಬೇಕು. ಮನುಧರ್ಮಶಾಸ್ತ್ರದಲ್ಲಿ ಏಳು ರೀತಿಯ ದಾಸರನ್ನು ಹೆಸರಿಸಿರುವುದನ್ನು ಪಿ.ವಿ.ಕಾಣೆಯವರು ಗುರುತಿಸಿದ್ದಾರೆ.[15] ಯುದ್ಧದಲ್ಲಿ ಸೆರೆಸಿಕ್ಕವರು, ಆಹಾರದ ಅಗತ್ಯಕ್ಕಾಗಿ ದಾಸರಾದವರು, ಮನೆಯಲ್ಲಿ ಜನಿಸಿದ ವ್ಯಕ್ತಿ (ದಾಸಿಪುತ್ರ), ಕೊಂಡ ದಾಸ, ದಾನವಾಗಿ ಬಂದ ವ್ಯಕ್ತಿ (ತಂದೆ ತಾಯಿಗಳಿಂದ ಅಥವಾ ಅವನ ಸಂಬಂಧಿಕರಿಂದ ನೀಡಲ್ಪಟ್ಟವನು), ಅನುವಂಶೀಯವಾಗಿ ಬಂದ ವ್ಯಕ್ತಿಗಳು (ತಂದೆಯ ಆಸ್ತಿಯ ಭಾಗವಾಗಿ ಬಂದದ್ದು) ದಂಡವನ್ನು ಕೊಡುವ ಕಾರಣಕ್ಕಾಗಿ ದಾಸನಾದವನು.[16]

ಕ್ರಿ.ಶ.1374ರ ವೇಳೆಯಲ್ಲಿ 'ತೊತ್ತು' ಆಚರಣೆಯಲ್ಲಿದ್ದ ಬಗ್ಗೆ ಅರುವನಹಳ್ಳಿ ಶಾಸನ ದಾಖಲೆಯನ್ನು ಒದಗಿಸಿದೆ.[17] ಅರುವನಹಳ್ಳಿಯ ಕೀರ್ತಿಯರಸರ ಮಕ್ಕಳಾದ ಹಿರಿಯ ಬಾಚಿಯಪ್ಪ, ಚಿಕ್ಕ ಬಾಚಿಯಪ್ಪ, ತಮ್ಮ ಸಹೋದರ ಭಟರ ಬಾಚಿಯಪ್ಪನ ಸಮ್ಮುಖದಲ್ಲಿ ಆಸ್ತಿಯನ್ನು ಹಂಚಿಕೊಳ್ಳುತ್ತಾರೆ. ಅರುವನಹಳ್ಳಿಯ ಒಕ್ಕಲು, ಕೆರೆ, ತೋಟ, ಗದ್ದೆ, ಬೆದ್ದಲು, ವಸ್ತು, ವಾಹನ, ಬಂಗಾರ, ಬೆಳ್ಳಿ, ಕಂಚು, ಮುಟ್ಟುಪತ್ರ, ಸಾಲ, ಎಮ್ಮೆ, ಎತ್ತು, ದವಸ, ದಾನ್ಯ, ಹಾಗ, ಮಾನ, ಭತ್ತ ಮೊದಲಾದ ಸಕಲ ಸಂಪತ್ತಿನೊಂದಿಗೆ ತೊತ್ತನ್ನು ವಿಭಾಗಿಸಿಕೊಳ್ಳುತ್ತಾರೆ. ತೊತ್ತನ್ನು ಆಸ್ತಿಯೊಂದಿಗೆ ಹಂಚಿಕೊಳ್ಳುತ್ತಿದ್ದರೆಂದರೆ, ತಂದೆ ಕೀರ್ತಿಯರಸನಿಂದ ಪಾರಂಪರಿಕವಾಗಿ ತೊತ್ತುಗಳು ಇದ್ದ ವಿಚಾರ ತಿಳಿಯುತ್ತದೆ. ಮನುಸ್ಮೃತಿಯಲ್ಲಿ ಉಲ್ಲೇಖಿಗೊಂಡಿರುವ 'ತಂದೆಯ ಆಸ್ತಿಯೊಂದಿಗೆ ಬರುವ ತೊತ್ತು'ನ್ನು ಪ್ರಸ್ತುತ ಶಾಸನವು ಪುಷ್ಟೀಕರಿಸುತ್ತದೆ.

1. ಚಿದಾನಂದಮೂರ್ತಿಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.428.
2. ಪೂರ್ವೋಕ್ತ, ಪುಟ.6.
3. ಪೂರ್ವೋಕ್ತ, ಪು.429.
4. Sharma.R.S, Sudras in Ancient India, P.40.
5. ಚಿದಾನಂದ ಮೂರ್ತಿ.ಎಂ: ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಷ್ಯತೆ, ಪು.9.
6. ಗೋಪಾಲ.ಬಾ.ರಾ(ಸಂ.): ಎಕ–7, ಮಳವಳ್ಳಿ 106, ಮುಟ್ಟಹಳ್ಳಿ ಪು.40.
7. ಪೂರ್ವೋಕ್ತ, ಎಕ–7, ನಾಗಮಂಗಲ 58, ಕೆಳಗೆರೆ, ಪು.31.
8. ನರಸಿಂಹಮೂರ್ತಿ.ಎ.ವಿ (ಸಂ.): ಎಕ–12, ಕಡೂರು 190, ಯಗಟಿ, ಪು.211.
9. ಗೋಪಾಲ.ಬಾ.ರಾ (ಸಂ.): ಎಕ–4, ಚಾಮರಾಜನಗರ 252, ಅಂಚವಾಡಿ, ಪು.155.
10. ನರಸಿಂಹಮೂರ್ತಿ.ಎ.ವಿ(ಸಂ.): ಎಕ–12, ತರೀಕೆರೆ 48, ಚಿಕ್ಕಕಾತೂರು, ಪು.399.
11. ಪೂರ್ವೋಕ್ತ, ಎಕ–12, ಕೊಪ್ಪ 16, ಬೊಮ್ಮಲಾಪುರ, ಪು. 291.
12. ಗೋಪಾಲ.ಬಾ.ರಾ (ಸಂ.): ಎಕ–5, ವಿಜಯಪುರ 143, ಪು.553.
13. ಚಿದಾನಂದ ಮೂರ್ತಿ.ಎಂ: ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಪು.23.
14. Ateendranath Bose: Origin of slavery in indo-Aryan economy, XIX–2, ಪು.145,46.
15. ಮಂಜುನಾಥ.ಸಿ.ಯು: ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಪು.185.
16. ಪೂರ್ವೋಕ್ತ, ಪು.185.
17. ಗೋಪಾಲ.ಬಾ.ರಾ (ಸಂ.): ಎಕ–7, ಮದ್ದೂರು 94, ಅರುವನಹಳ್ಳಿ, ಪು.310.